ಗಂಡನೆಂಬ ನೀನು ನನಗೆ ಅರ್ಥವಾಗದ ನವ್ಯ ಪೇಂಟಿಂಗ್‌ನ ಮಾದರಿಯವನು. ಎಲ್ಲವನ್ನೂ ಕರ್ತವ್ಯವೆಂಬಂತೆಯೇ ಮಾಡುವೆ. ಮನೆಗೆ ರೇಷನ್ ತಂದುಹಾಕೋದು, ಮುದಿ ತಂದೆ ತಾಯಿಗಳ ಸೇವೆ, ತಮ್ಮ ತಂಗಿಯರ ಬೇಕು ಬೇಡಗಳ ಪೂರೈಕೆ, ಆಳುಗಳಿಗೆ ಸಂಬಳ ನೀಡೋದು, ತಾನು ಕಟ್ಟಿಸುವ ಬಂಗಲೆಗಳಿಗೆ ಇಟ್ಟಿಗೆ, ಕಬ್ಬಿಣ, ಸಿಮೆಂಟ್, ತೊಲೆ ತುಂಡು ಕರಾರುವಾಕ್ಕಾಗಿ ಒದಗಿಸಿ ಕೆಲಸವಾದ ಬಳಿಕ ಹಣ ಎಣಿಸೋದು, ಎಲ್ಲವೂ ದಿನಚರಿಯ ತಪ್ಪದ ಕರ್ತವ್ಯಗಳೆ. ಇವನ್ನು ಒಪ್ಪೋಣ. ಕರ್ತವ್ಯವೇ ದೇವರೆಂದು ತಿಳಿದಿದ್ದಾನೋ ಏನೋ! ಆದರೆ, ಹೆಂಡತಿ ಮಕ್ಕಳನ್ನು ಪ್ರೀತಿಸೋದೂ ಕರ್ತವ್ಯ ಆಗಬಾರದಲ್ಲವೆ. ಭಾವನೆಗಳೇ ಇಲ್ಲದೆ ಬಿಲ್ಡಿಂಗ್ ಕಟ್ಟಬಹುದೇನೋ. ಬದುಕು ಕಟ್ಟಲಾದಿತೇ? ಕರ್ತವ್ಯವೇ ದೇವರೆಂದುಕೊಂಡವರು ಕಾಸಿನಲ್ಲೇ ಕೈಲಾಸ ಕಾಣಬಹುದಷ್ಟೇ. ಕಾಯಕದಲ್ಲಿ ಪ್ರಾಮಾಣಿಕನಾದರೆ ಮನಕ್ಕೆ ತೃಪ್ತಿಯಾದೀತಷ್ಟೆ. ನನ್ನಂಥವಳಿಗೆ ಭಾವನೆಗಳೇ ಬದುಕು. ಕರ್ತವ್ಯದಲ್ಲಿ ಮಾತ್ರವಲ್ಲ, ಪ್ರೇಮದಲ್ಲೂ ದೇವರನ್ನು ಕಾಣುವ ದಾಹಿ ನಾನು. ನಿನಗೆ ರಾತ್ರಿಯಷ್ಟೇ ನಾನು ಅಥವಾ ನನ್ನ ದೇಹ ಬೇಕು. ಹಗಲೆಲ್ಲಾ ಮೈಮರೆತು ಕರ್ತವ್ಯಗಳಲ್ಲಿ ಮುಳುಗಿರುವ ನಿನಗೆ ಪಾರ್ಟಿ, ಫಂಕ್ಷನ್‌ಗಳು ಬಂದಾಗಷ್ಟೇ ನಮ್ಮ ನೆನಪು. ಇಷ್ಟವಿರಲಿ ಬಿಡಲಿ ಸ್ಲೀವ್‌ಲೆಸ್ ಬ್ಲೌಸ್ ಹಾಕಿ, ಹೊಕ್ಕಳ ಕೆಳಗೆ ಸೀರೆಸುತ್ತಿ, ಮೈತುಂಬಾ ಬಂಗಾರ ಹೇರಿಕೊಡು, ಮಕ್ಕಳಿಬ್ಬರಿಗೂ ಡ್ರೆಸ್ ಹಾಕಿ, ಶೋಕೇಸ್‌ನ ಗೊಂಬೆಯಂತೆ ಕಾರಲ್ಲಿ ಬರಬೇಕು. ನಿನ್ನೆಲ್ಲಾ ಪಾರ್ಟ್‌ನರ್ಸ್, ಕಂಟ್ರಾಕ್ಟರ್‌ಗಳ ಕಣ್ಣೆದುರು ನೀನು ನಮ್ಮನ್ನು ಇಟ್ಟುಕೊಂಡಿರುವ ರೀತಿಗೆ ಜಂಭದ ಜಾಹೀರಾತುಗಳಾಗಬೇಕು. ನೀನು ಕುಡಿದು ಮೆರೆದು ನಮ್ಮನ್ನು ಮರೆತುಬಿಟ್ಟರೂ ಕೋಲಾ ಹೀರುತ್ತಾ, ಚಿಪ್ಸ್ ತಿನ್ನುತ್ತಾ, ಮಂದಬೆಳಕಿನಲ್ಲಿ ತೂಕಡಿಸುತ್ತಾ ಕೂತಿರುವಾಗ ದಡಬಡಿಸಿ ಬಂದು ನಾವು ಡಿನ್ನರ್ ಮುಗಿಸಲು ನೀನು ತೋರುವುದು ಕಾತರವೋ, ಆತುರವೋ, ಕಾಳಜಿಯೋ ಒಂದೂ ಅರ್ಥವಾಗದು. ಮತ್ತೆ ಕಾರಲ್ಲಿ ಸರಕು ತಂದಂತೆ ತಂದು ಬೆಡ್‌ರೂಮಿಗೆ ಎಸೆಯುವೆ. ಮಕ್ಕಳು ಎದ್ದಿರುವಾಗ, ಮತ್ತಿನಲ್ಲಿಯೇ ಸೆಕ್ಸ್ ಅನ್ನು ಕರ್ತವ್ಯವೋ, ಚಟವೋ, ದಿನಚರಿಯಲ್ಲಿ ಒಂದೆಂತಲೋ ಮುಗಿಸಿ ಮಗ್ಗಲು ತಿರುಗಿದೆಯೆಂದರೆ ಅಬ್ಬಾ! ಅದೆಂತಹ ಸುಖ ನಿದ್ರೆಯೋ ಗಂಡ ನಿನ್ನದು!

ಇದೆಲ್ಲಾ ಸುಡಗಾಡು ಏನೇ ಇರಲಿ, ನಾನು ಬಯಸಿದ ಜೀವನವೇ ನನಗೀಗ ಸಿಕ್ಕಿದೆ ಎಂದಾಗ ನಾನಾದರೂ ಯಾರನ್ನು ದೂರಲಿ? ನನ್ನ ದಿನಚರಿಯಲ್ಲಿ ಯೌವನದ ಪುಟಗಳಲ್ಲಿ ಬಂದವನೊಬ್ಬನ ನೆನಪು ಈಗಲೂ ಕಾಡಲು ಕಾರಣ ಕೂಡ ನೀನೇ. ನಿನ್ನ ಕರ್ತವ್ಯ ನಿಷ್ಠೆಯೇ ಕಾರಣ ಮಾರಾಯ. ಅವನೊಬ್ಬನಿದ್ದ, ಭಾವನೆಗಳನ್ನೇ ಉಸಿರಾಡಿದವ, ನನ್ನನ್ನೇ ಆರಾಧಿಸಿದವ, ಮೈಮುಟ್ಟದೆ, ಮುತ್ತಿಡದೆ ಮೈತುಂಬಾ ಪ್ರೀತಿಸಿದವ. ದಿನನಿತ್ಯ ಮಗ್ಗಲಲ್ಲಿ ನಿನ್ನಂತೆ ಇರದಿದ್ದರೂ ಮನಸ್ಸಲೇ ಮೆತ್ತಿಕೊಂಡಿದ್ದವ. ಒಂದು ದಿನ ನೋಡದಿದ್ದರೆ ಜಗತ್ತೇ ಮುಳುಗಿದಂತೆ ಭಾಸವಾದವ. ಪ್ರೇಮವೇ